# ಕರ್ನಾಟಕ ಜಾನಪದ ಸಂಸ್ಕೃತಿ: ಅವಲೋಕನ

**ಡಾ. ಎಸ್. ಎಂ. ಗೋಪಿ**
ಕನ್ನಡ ಸಹಾಯಕ ಪ್ರಾಧ್ಯಾಪಕ
ಸ್ನಾತಕೋತ್ತರ ಕೇಂದ್ರ, ರಾಮನಗರ.
ಬೆಂಗಳೂರು ವಿಶ್ವವಿದ್ಯಾಲಯ.
gopi7519@gmail.com

ಕರ್ನಾಟಕವು ಸಮೃದ್ಧ ಜಾನಪದ ಸಂಪತ್ತಿನ ಕಣಜವಾಗಿದೆ. ಇಲ್ಲಿನ ಜಾನಪದ ಅಧ್ಯಯನದ ಚರಿತ್ರೆಯನ್ನು ಅವಲೋಕದ ಮಾಡಿದರೆ ಸಾಕಷ್ಟು ವೈವಿಧ್ಯಮಯ ಜಾನಪದ ತವನಿಧಿಯಿರುವುದು ಕಂಡುಬರುತ್ತದೆ. ಕರ್ನಾಟಕ ಜಾನಪದ ಸಂಶೋಧನೆಯಲ್ಲಿ ಇತರ ದೇಶ, ರಾಜ್ಯಗಳಿಗೆ ಹೋಲಿಸಿದರೆ ಉನ್ನತ ಮಟ್ಟದಲ್ಲಿರುವುದು ಕಂಡುಬರುತ್ತದೆ. ಇವೆಲ್ಲದಕ್ಕೂ ಕಳಶಪ್ರಾಯೆಂಬಂತೆ ವಿಶ್ವದ ಮೊದಲ ಜಾನಪದ ವಿಶ್ವವಿದ್ಯಾಲಯ ಆರಂಭವಾಗಿರುವುದು ಕರ್ನಾಟಕದ ಹಾವೇರಿ ಜಿಲ್ಲೆಯ ಗೊಟಗೋಡಿಯಲ್ಲಿ. ಇದು ಕನ್ನಡಿಗರಾದ ನಮ್ಮೆಲ್ಲರಿಗೂ ಹೆಮ್ಮೆ ತರುವ ವಿಚಾರವಾಗಿದೆ. 1966ನೇ ಇಸವಿ ಕರ್ನಾಟಕ ಜಾನಪದ ಅಧ್ಯಯನದಲ್ಲಿ ಒಂದು ಐತಿಹಾಸಿಕ ವರ್ಷ, ಜಾನಪದಕ್ಕೆ ಅಕಾಡೆಮಿಕ್ ಮಾನ್ಯತೆ ದೊರೆತ ವರ್ಷ ಅದು. ಹಾಗೆಯೇ ಡಾ.ದೇ.ಜ.ಗೌ ಹಾಗೂ ಡಾ.ಹಾ.ಮಾ.ನಾಯಕರ ಕ್ರಿಯಾಶಕ್ತಿ, ಪರಿಶ್ರಮದಿಂದಾಗಿ ಕರ್ನಾಟಕದಲ್ಲಿ ಮೊದಲಿಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಜಾನಪದ ಅಧ್ಯಯನ ಸ್ನಾತಕೋತ್ತರ ಶಿಕ್ಷಣದಲ್ಲಿ ಸ್ಥಾನ ಪಡೆಯಿತು. 1972ರಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಆರಂಭಿಸಿ ಜಾನಪದ ಅಧ್ಯಯನಕ್ಕೆ ಹೊಸ ದಿಕ್ಕನ್ನು ತೆರೆದರು. ದೇ.ಜ.ಗೌ. ಜೀ.ಶಂ.ಪರಮಶಿವಯ್ಯ, ಪಿ.ಆರ್.ತಿಪ್ಪೇಸ್ವಾಮಿಯವರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾಲಯ ಜಾನಪದ ವಸ್ತುಸಂಗ್ರಹಾಲಯವೊಂದನ್ನು ಆರಂಭಿಸಿತು. ಭೌತಿಕ ಜಾನಪದ ಸಂಗ್ರಹದ ಅಧ್ಯಯನದ ದೃಷ್ಟಿಯಿಂದ ಇದೊಂದು ಮಹತ್ವದ ಹೆಜ್ಜೆಯಾಗಿ ದೇಶ–ವಿದೇಶಗಳ ವಿದ್ವಾಂಸರ ಮನ್ನಣೆಯನ್ನು ಗಳಿಸಿತು. ಈ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದದ ಸ್ಥಿತ್ಯಂತರ, ಇಟ್ಟ ಹೆಜ್ಜೆ ಗುರುತುಗಳನ್ನು ಪ್ರಾತಿನಿಧಿಕ ಕೃತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಪ್ರಸ್ತುತ ಲೇಖನದ ಆಶಯವಾಗಿದೆ.

**ಆರಂಭದ ಹೆಜ್ಜೆಗಳು**

ಕರ್ನಾಟಕದಲ್ಲಿ 19ನೇ ಶತಮಾನದ ಉತ್ತರಾರ್ಧದಲ್ಲಿ ವಿದೇಶಿ ಮಿಷನರಿಗಳು ಹಾಗೂ ಬ್ರಿಟಿಷ್ ಆಡಳಿತಗಾರರು ಧರ್ಮಬೋಧನೆ ಮತ್ತು ಕ್ರೈಸ್ತ ಧರ್ಮಗ್ರಂಥಗಳ ಭಾಷಾನುವಾದದ ಕಾರಣಕ್ಕಾಗಿ ಸ್ಥಳೀಯ ಸಂಸ್ಕೃತಿಗಳ ಅಧ್ಯಯನಕ್ಕೆ ತೊಡಗಿದರು. ಈ ಬಗೆಯ ಆಸಕ್ತಿ ಹಾಗೂ ಕಾಳಜಿಯಿಂದಲೇ ಕರ್ನಾಟಕ ಜಾನಪದ ಅಧ್ಯಯನವನ್ನು ನಡೆಸಿದ ವಿದೇಶಿಯರಲ್ಲಿ ಅಬ್ಬೆಡುಬಾಯ್, ಕರ್ನಲ್ ಮೆಕೆಂಜಿ, ಚಾರ್ಲ್ಸ್‌ಗೋವರ್, ಪ್ಲೀಟ್, ಮೋಗ್ಲಿಂಗ್, ಕಿಟೆಲ್ ಪ್ರಮುಖರಾಗಿದ್ದಾರೆ. ಕನ್ನಡ ಜನಪದ ಗೀತೆಗಳ ಇತಿಹಾಸ ಆರಂಭವಾಗುವುದು ಜಾನ್ ಲೇಡನ್‌ನಿಂದ. ಇವನು ಟಿಪ್ಪುವಿನ ಪತನಾನಂತರ ಶ್ರೀರಂಗಪಟ್ಟಣದ ಕೇಡುಗಾಲವನ್ನು ಕುರಿತ ಲಾವಣಿಯೊಂದನ್ನು ಸಂಗ್ರಹಿಸಿ ಇಂಗ್ಲೀಷ್‌ಗೆ ಭಾಷಾಂತರಿಸಿ ಪ್ರಕಟಿಸುತ್ತಾನೆ. ಅಬ್ಬೆ ಡುಬಾಯ್ ಕರ್ನಾಟಕದ ಜನಜೀವನವನ್ನು ಕುರಿತು "Hindu Manners Customs and Ceremonies" ಕೃತಿ ರಚಿಸುತ್ತಾನೆ. ಹರ್ಮನ್ ಮೋಗ್ಲಿಂಗ್‌ರವರು 'ಕನ್ನಡ ಗಾದೆಗಳ ಸಂಕಲನ'ವೊಂದನ್ನು ಹೊರತರುತ್ತಾರೆ. ನಂತರ ಪ್ಲೀಟ್‌ರವರು ಲಾವಣಿಗಳನ್ನು ಸಂಗ್ರಹಿಸಿ ಪ್ರತಿ ಲಾವಣಿಯ ರಾಜಕೀಯ, ಸಾಮಾಜಿಕ ಹಿನ್ನೆಲೆಯನ್ನು ಕುರಿತು ಟಿಪ್ಪಣಿ ಬರೆದು ಪ್ರಕಟಿಸುತ್ತಾರೆ. ಹೀಗೆ ಜಾನಪದ ವೈಜ್ಞಾನಿಕ ಸಂಗ್ರಹಣ ವಿಧಾನ ಪ್ಲೀಟರಿಂದ ಆರಂಭವಾಯಿತೆನ್ನಬಹುದು. ಹೀಗೆ ವಿದೇಶಿ ವಿದ್ವಾಂಸರ ಪ್ರೇರಣೆಯೊಂದಿಗೆ ಕನ್ನಡದ ವಿದ್ವಾಂಸರಾದ ಬಿ.ಎಂ.ಶ್ರೀ, ಮಾಸ್ತಿ, ಬೇಂದ್ರೆ, ಅರ್ಚಕ ವೆಂಕಟೇಶ, ಶ್ರೀಕಂಠೇಶ ಗೌಡ ಮೊದಲಾದವರು ಜನಪದ ಸಾಹಿತ್ಯ ಸಂಗ್ರಹ ನಮ್ಮಲ್ಲಾಗಬೇಕಾದ ತುರ್ತಿನ ಕೆಲಸ ಎಂದು ತಮ್ಮ ಉಪನ್ಯಾಸಗಳ ಮೂಲಕ, ಬರಹಗಳ ಮೂಲಕ ಪ್ರತಿಪಾದಿಸಿದರು. ಎಂ.ಎಸ್.ಪುಟ್ಟಣ್ಣ, ಶ್ರೀಕಂಠೇಶ ಗೌಡರು ಕರ್ನಾಟಕ ಜಾನಪದ ಚಟುವಟಿಕೆಗಳಿಗೆ ಆರು ಕಟ್ಟಿದ ದೇಶೀಯ ವಿದ್ವಾಂಸರಲ್ಲಿ ಪ್ರಮುಖರು. ಇವರಿಬ್ಬರೂ ಮೈಸೂರು ಸುತ್ತಲಿನ ಕತೆ, ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಬೇಂದ್ರೆಯವರು ಜಾನಪದ ಸತ್ವವನ್ನು ತಮ್ಮ ಕಾವ್ಯದಲ್ಲಿ ಕಸಿ ಮಾಡಿದರು. 1925ರಲ್ಲಿ ಮಾಸ್ತಿಯವರು ಬರೆದ **'ಕನ್ನಡ ಲಾವಣಿ ಸಾಹಿತ್ಯ'** ಲೇಖನ ಜಾನಪದದ ಕಡೆಗೆ ಸಾಮೂಹಿಕ ಆಸಕ್ತಿಯನ್ನು ಹುಟ್ಟುಹಾಕಿತು. ಮೈಸೂರಿನ ದಕ್ಷಿಣ ಕರ್ನಾಟಕದಲ್ಲಿ ಮೆಲ್ಲಗೆ ಜನಪದ ಸಾಹಿತ್ಯಾಸಕ್ತಿ ಕುದುರುತ್ತಿದ್ದಂತೆಯೇ ಉತ್ತರ ಕರ್ನಾಟಕದಲ್ಲಿಯೂ 'ಗೆಳೆಯರ ಗುಂಪು' ಎಂಬ ಉತ್ಸಾಹಿ ತರುಣ ಸಾಹಿತಿಗಳ ಸಂಘವೊಂದು ಧಾರವಾಡದಲ್ಲಿ ರೂಪುಗೊಂಡು ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯಪ್ರವೃತ್ತವಾದುದು ಕನ್ನಡ ಜನಪದ ಸಾಹಿತ್ಯದ ಚರಿತ್ರೆಯಲ್ಲಿ ಮರೆಯಲಾಗದ ಘಟನೆಯಾಗಿದೆ. ಬೇಂದ್ರೆಯವರ ನೇತೃತ್ವದಲ್ಲಿ 'ಹಲಸಂಗಿ ಗೆಳೆಯ'ರಾದ ಚನ್ನಮಲ್ಲಪ್ಪ, ಕಾಪಸೆ ರೇವಪ್ಪ, ಪಿ.ಧೂಲಸಾಹೇಬ, ಸಿಂಪಿಲಿಂಗಣ್ಣ ಮೊದಲಾದವರು ತಮ್ಮ ಸುತ್ತಮುತ್ತಲ ಜನಪದ ಗೀತ ಸಾಹಿತ್ಯವನ್ನು ಕಂಡು ಸಂಗ್ರಹಕಾರ್ಯ ಕೈಗೊಂಡು ಯಶಸ್ವಿಯಾಗಿ ಸಂಪಾದಿಸಿ ಪ್ರಕಟಿಸಿದ್ದು ಬಹುದೊಡ್ಡ ಸಾಧನೆ.

**ಗರತಿಯ ಹಾಡು:**

ಕನ್ನಡ ಜಾನಪದ ಇತಿಹಾಸದಲ್ಲಿ 'ಹಲಸಂಗಿ ಗೆಳೆಯರು' ಮಾಡಿದ ಸಾಧನೆ ಬಹಳ ಮಹತ್ವದ್ದು. ಈ ಗುಂಪಿನ ಮಧುರಚೆನ್ನ, ಕಾಪಸೆ ರೇವಪ್ಪ ಮತ್ತು ಸಿಂಪಿ ಲಿಂಗಣ್ಣನವರು 1931ರಲ್ಲಿ ಈ ಸಂಕಲನವನ್ನು ಸಂಗ್ರಹಿಸಿದರು. ಇಲ್ಲಿನ ಹಾಡುಗಳು ನಮ್ಮ ನಾಡಿನ ಮಹಿಳೆಯರ ಎದೆಯಾಳದ ದನಿಯಾಗಿವೆ. ಸಾವಿರಾರು ಜನಪದ ಗೀತೆಗಳ ಪೈಕಿ ಎಂಟುನೂರನ್ನು ಆಯ್ದು ಈ ಗ್ರಂಥ ರೂಪದಲ್ಲಿ ಪ್ರಕಟಿಸಿರುವುದಾಗಿ ಬೇಂದ್ರೆಯವರು ತಮ್ಮ 'ಪರಿಚಯ' ಭಾಗದಲ್ಲಿ ತಿಳಿಸಿದ್ದಾರೆ. ಬಿ.ಎಂ.ಶ್ರೀರವರು ಈ ಗ್ರಂಥಕ್ಕೆ ಪ್ರಸ್ತಾವನೆ ಬರೆದಿರುವುದು ಈ ಗ್ರಂಥದ ಮೌಲ್ಯವನ್ನು ಹೆಚ್ಚಿಸಿದೆ. ಬೇಂದ್ರೆಯವರ ಪರಿಚಯಾತ್ಮಕ ಬರಹವು ಇದರಲ್ಲೇ ಸೇರಿರುವಂಥದ್ದು,

ಶ್ರೀಯವರು ಜನಪದ ಸಾಹಿತ್ಯದ ಹುಟ್ಟು, ಬೆಳವಣಿಗೆ, ಸ್ವರೂಪ, ಸತ್ವ, ಇಂಥ ಸಹಜ ಸಾಹಿತ್ಯವನ್ನು ಸಾಯಗೊಡದೆ ರಕ್ಷಿಸಿ ಬೆಳೆಸಬೇಕಾದ ಅವಶ್ಯಕತೆ, ಇದಕ್ಕೆ ಬೇಕಾದ ಪ್ರಚಾರದ ಅನಿವಾರ್ಯತೆ, ಮುಂತಾದ ಜನಪದ ಸಾಹಿತ್ಯ ಕ್ಷೇತ್ರದ ನಾನಾ ಮಗ್ಗಲುಗಳನ್ನು ಅತ್ಯಂತ ವೈಜ್ಞಾನಿಕವಾಗಿ, ಸಮರ್ಪಕವಾಗಿ ಸಂಗ್ರಹವಾಗಿ ವಿವೇಚಿಸಿರುವುದು ಈ ಗ್ರಂಥಕ್ಕೆ ವಿಶೇಷ ಮೌಲ್ಯವನ್ನು ಆದರ ಪುರಸ್ಕಾರವನ್ನು ತಂದುಕೊಟ್ಟಿದೆ.

ಈ ಗ್ರಂಥದ ಮಗದೊಂದು ವೈಶಿಷ್ಟ್ಯವೆಂದರೆ ಇದುವರೆಗೆ ಪರಿಶೀಲಿಸಿದ ಆಧಾರಗಳಿಂದ ನಮಗೆ ತಿಳಿದ ಮಟ್ಟಿಗೆ ಮೊಟ್ಟಮೊದಲ ಬಾರಿಗೆ, ನಮ್ಮ ಪರಂಪರಾಗತ ಗ್ರಾಮ್ಯ ಸಾಹಿತ್ಯವನ್ನು 'ಜನಪದ ಸಾಹಿತ್ಯ' ಎಂದು ಕರೆದು, ಅದಕ್ಕೊಂದು ಸಾರ್ಥಕ ಹೆಸರು ಕೊಟ್ಟದ್ದು. ಇದಕ್ಕೆ ಮೊದಲು ಎಲ್ಲಿಯೂ ಜನಪದ ಸಾಹಿತ್ಯ, ಜನಪದಗೀತೆ, ಜನಪದ ಜೀವನ ಎಂಬ ಶಬ್ದ ಪ್ರಯೋಗವಾದಂತಿಲ್ಲ, ಶ್ರೀಯವರು ಅಧಿಕಾರವಾಣಿಯಿಂದ ಜನಪದ ಸಾಹಿತ್ಯದ ಮೂಲಭೂತ ಸತ್ವವನ್ನು ಉದ್ಘೋಷಿಸಿ, 'ಜನವಾಣಿ ಬೇರು; ಕವಿವಾಣಿ ಹೂವು' – ಎಂದು ಸಾರಿ, ಶ್ರೀ ಸಾಮಾನ್ಯರಾದ ಜಾನಪದರೂ ಹೊಸ ಹಾಡನ್ನು ಕಟ್ಟಿ ಹಾಡಿ, ಹೊಸ ಸಾಹಿತ್ಯ ನಿರ್ಮಾಣ ಮಾಡಬಲ್ಲರೆಂದು ಕೊಂಡಾಡಿ, ಅದುವರೆಗೆ ಮೂಲೆಗುಂಪಾಗಿದ್ದ ಕನ್ನಡ ಜನಪದ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಮಂದಿರದಲ್ಲೊಂದು ಶಾಶ್ವತ ಪೀಠ ಪ್ರತಿಷ್ಠಾಪಿಸಿದ್ದು ಮಹತ್ವಪೂರ್ಣ ಸಾಧನೆ.

ದ.ರಾ. ಬೇಂದ್ರೆಯವರು ಗರತಿಯ ಹಾಡಿನ ಬಗೆಯವಾದ ಇನ್ನೂ ಕೆಲವು ಜನಪದ ಗೀತೆಗಳ ಸ್ವಾರಸ್ಯವನ್ನು ವಿವರಿಸಿ, ಬಹುಪಾಲಿನವು ತ್ರಿಪದಿ ಛಂದಸ್ಸಿನಲ್ಲಿರುವ ಬಗೆಗೆ, ಇವುಗಳ ಗೇಯಾಂಶದ ಬಗೆಗೆ ನುಡಿದಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಅದುವರೆಗೆ ಪ್ರಕಟವಾಗಿದ್ದ ಜನಪದ ಸಾಹಿತ್ಯ ಕುರಿತ ಬರಹಗಳನ್ನು ತಾವು ಗಮನಿಸಿದ್ದನ್ನು ತಿಳಿಸಿದ್ದಾರೆ. ಶ್ರೀಯವರ ಪ್ರೋತ್ಸಾಹದ ಮೇರೆಗೆ ಕಲಬುರ್ಗಿ, ಬೆಳಗಾವಿ ಮತ್ತು ಮೈಸೂರು ನಗರಗಳಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ತಾವು ಜನಪದ ಸಾಹಿತ್ಯ ಕುರಿತು ಚರ್ಚಿಸಿದ್ದನ್ನು ಸ್ಮರಿಸಿಕೊಂಡಿದ್ದಾನೆ. ಆಶೀರ್ವಾದಪರ ನುಡಿಗಳಾಡಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರರ ನುಡಿಗಳೂ 'ಅರಿಕೆ' ಎಂಬ ಭಾಗದಲ್ಲಿ ಸುದೀರ್ಘ ಪ್ರಸ್ತಾಪ ಮಾಡಿರುವ ಸಿಂಪಿ ಲಿಂಗಣ್ಣನವರ ವಿವರಗಳೂ ವಿಚಾರಾರ್ಹವಾಗಿವೆ.

ಗರತಿಯ ಹಾಡಿನ ಸಂಪೂರ್ಣ ಸ್ವಾರಸ್ಯ, ವೈಶಿಷ್ಟ್ಯಗಳನ್ನು ಎರಡೇ ಮಾತುಗಳಲ್ಲಿ ಹೇಳುವುದು ಕಷ್ಟ. 'ಅದು ಪ್ರಕಟಗೊಂಡು ಜನತೆಯ ಕೈಸೇರುತ್ತಿದ್ದಂತೆಯೇ ಅದ್ವಿತೀಯ ಪ್ರಶಂಸೆ, ಕೀರ್ತಿ, ಪ್ರಾಚುರ್ಯ, ಪ್ರಾಧಾನ್ಯಗಳನ್ನು ಗಳಿಸಿಕೊಂಡ ಈ ಕೃತಿ, ಇಂದಿಗೂ ಮಾಸದ ಅಮರ ಜನಪದ ಗೀತ ಸಂಗ್ರಹವಾಗಿದೆ. ಈ ಕೃತಿ ಕನ್ನಡ ಜನಪದ ಕ್ಷೇತ್ರದ ನಾಯಕ ಕೃತಿ, ದಿಟವಾದ ಜಾನಪದ ಕ್ಷೇತ್ರವನ್ನು ತೋರುವ ಕೈಗಂಬ, ಪರಿಶುದ್ಧ ಜನಪದ ತ್ರಿಪದಿಗಳಿಗೆ ಇರುವ ವಿಶ್ವಾಸಾರ್ಹ ಆಕರ. ಉತ್ತರ ಕರ್ನಾಟಕದ ವಿಶೇಷವಾಗಿ 'ತದ್ದೆವಾಡ' ಪ್ರಾಂತದ ಆಡುಮಾತಿನ ಬಂಧ, ಬಳುಕುಗಳನ್ನು ಹೊತ್ತು ಹುಟ್ಟಿರುವ ಈ ತ್ರಿಪದಿಗಳಿಗೆ ಸರಿಮಿಗಿಲೆನ್ನಿಸುವ ಜನಪದ ಗೀತ ಸಂಗ್ರಹಗಳು ಕನ್ನಡದಲ್ಲಿ ಬಹಳ ಇಲ್ಲ.'[1]

**ಹುಟ್ಟಿದ ಹಳ್ಳಿ ಹಳ್ಳಿಯ ಹಾಡು:**

ಅರ್ಚಕ ಬಿ.ರಂಗಸ್ವಾಮಿರವರು ಈ ಕೃತಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕೃಷ್ಣರಾಜಪೇಟೆ ತಾಲ್ಲೂಕಿನ ಬಂಡಿ ಹೊಳೆಗ್ರಾಮವನ್ನು ತಮ್ಮ ಜೀವನದ ಕೇಂದ್ರವಾಗಿರಿಸಿಕೊಂಡು ಶ್ರೀಯುತರು ಅನೇಕ ವರ್ಷಗಳವರೆಗೆ ಜನಪದ ಜೀವನವನ್ನು ಸೂಕ್ಷ್ಮವಾಗಿ ಗಮನಿಸಿದ್ದರು. ಜಾನಪದರ ನೋವು ನಲಿವುಗಳನ್ನು ಕಣ್ಣಾರೆ ಕಂಡು ಬಲ್ಲವರಾಗಿದ್ದರು; ಅವರ ಸಾಹಿತ್ಯದ ಸೊಬಗನ್ನು ಅರಿತವರಾಗಿದ್ದರು. 'ತಮ್ಮೂರಿನಲ್ಲಿ ಪ್ರತಿನಿತ್ಯ ಕೇಳುತ್ತಿದ್ದ ಬೀಸುವ ಪದ, ಕೋಲಾಟದ ಪದ ಇತ್ಯಾದಿ ಪದಗಳು ಅವರ ವಿಶೇಷ ಗಮನ ಸೆಳೆದವು. ಇಷ್ಟರಲ್ಲಾಗಲೇ ತುಂಬಾ ಪ್ರಚುರವಾಗಿದ್ದ ಗರತಿಯ ಹಾಡಿನ ಕೆಲವಾದರೂ ಗೀತೆಗಳು ವಿದ್ಯಾವಂತರೂ ಇಂಗ್ಲೀಷ್ ಭಾಷೆಯನ್ನು ತಕ್ಕಮಟ್ಟಿಗೆ ತಿಳಿದವರೂ ಆಗಿದ್ದ ರಂಗಸ್ವಾಮಿ ಅವರನ್ನು ತಲುಪಿದ್ದಿರಬೇಕು; ಇವೂ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸುವಂತೆ ಪ್ರಚೋದಿಸಿರಬೇಕು. ಒಟ್ಟಿನ ಮೇಲೆ, ತಮ್ಮೂರಿನ ಪ್ರಾಂತದ ಜಾನಪದರ ಜೀವನಕ್ರಮ, ಆದರ್ಶ–ಇದನ್ನೇ 'ಜನಪದ ಸಂಸ್ಕೃತಿ' ಎನ್ನುವುದನ್ನೂ ಅತ್ಯಂತ ಸಾರ್ಥಕವಾಗಿ ಕನ್ನಡಿಗರೆಲ್ಲರಿಗೂ ತಮ್ಮ ಕೃತಿಯ ಮುಖಾಂತರ ಮೊಟ್ಟಮೊದಲ ಬಾರಿಗೆ ಪರಿಚಯ ಮಾಡಿಕೊಟ್ಟು ಕೃತಾರ್ಥರಾದುದು ದೊಡ್ಡ ವಿಷಯ. ಈ ಗ್ರಂಥಕ್ಕೆ ಬರೆದ 'ಅರಿಕೆ' ಯಲ್ಲಿ ಶ್ರೀಯುತರಿಗೆ 'ಹಳ್ಳಿಯ ಪಾಮರ ಸಾಹಿತ್ಯ'ದ ಬಗೆಗಿದ್ದ ಕಳಕಳಿ ಸುವ್ಯಕ್ತವಾಗುತ್ತದೆ.'[2]

'ರಂಗಸ್ವಾಮಿಯವರು ಜನಪದ ಗೀತೆಗಳೊಂದಿಗೆ 380 ಜನಪದ ಗಾದೆಗಳನ್ನೂ ಹಬ್ಬಹರಿದಿನಗಳ ವಿವರಣೆಯಲ್ಲಿ ಬೇಟೆ, ಕಣ, ಮನೆ, ಕುಯಿಲು, ಕುಡಿತ, ಕುಣಿಗಳ ನುಡಿ ಚಿತ್ರಗಳನ್ನೂ, ಜಾನಪದರ ಸಂಭಾಷಣೆಯ ವೈಖರಿಯನ್ನೂ – ಒಂದು ಮಾತಿನಲ್ಲಿ ಹೇಳಬೇಕೆಂದರೆ, ತಮ್ಮೂರಿನ ಕಡೆಯ ಸಮಗ್ರ ಜನಪದ ಸಂಸ್ಕೃತಿಯನ್ನು ಮೊದಲ ಬಾರಿಗೆ ಜಾನಪದರ ಪರಿಭಾಷೆಯಲ್ಲಿಯೇ ಎತ್ತಿ ತೋರಿಸುತ್ತಿದ್ದೇನೆ ಎಂಬ ಹೆಮ್ಮೆಯ ಜೊತೆಗೆ ಸುಸಂಸ್ಕಾರಜನಿತ ಸಹಜ ವಿನಯವೂ ಹದವಾಗಿ ಬೆರೆತಿದೆ. ನಮ್ಮ ಸಂಸ್ಕೃತಿಯನ್ನು ಎಚ್ಚರದಿಂದ ಕಾಪಾಡಿಕೊಳ್ಳಬೇಕೆಂಬ ಪ್ರಜ್ಞೆ ನಿಚ್ಚಳವಾಗಿದೆ. ನವನಾಗರಿಕತೆಯ ದುಷ್ಪರಿಣಾಮಗಳ ಅರಿವಿದೆ. ತತ್ಫಲವಾಗಿ ನಿರ್ವಂಚನೆಯಿಂದ ಮೂಡಿ ಬಂದ ಜನಪದ ಸಂಸ್ಕೃತಿ ಶ್ರೀಯುತರ 'ಹುಟ್ಟಿದ ಹಳ್ಳಿ'ಯಲ್ಲಿ ಒಡೆದು ಕಾಣುತ್ತದೆ.'[3] ಇಂಥ ಪ್ರಜ್ಞಾವಂತ ಜಾನಪದ ತಜ್ಞರ ಬಳಗ ಹೆಚ್ಚಿದಷ್ಟು ನಮ್ಮ ಸಾಹಿತ್ಯ ಕ್ಷೇತ್ರ ಹುಲುಸಾಗುತ್ತದೆ. ಕನ್ನಡ ಜಾನಪದ ತಜ್ಞರಲ್ಲಿ ಒಬ್ಬರಾದ ಡಾ.ಹಾ.ಮಾ.ನಾಯಕರ ಪ್ರಯತ್ನದ ಫಲವಾಗಿ ಈ ಕೃತಿ ಮತ್ತೆ ಅಚ್ಚಾಗಿ ಬೆಳಕಿಗೆ ಬಂದಿದೆ. 'ಕಲಾದೃಷ್ಟಿಯಿಂದಲೂ ಶಾಸ್ತ್ರ ದೃಷ್ಟಿಯಿಂದಲೂ ಪ್ರಮುಖವೆನಿಸುವ ಈ ಕೃತಿ ಸಂಶೋಧಕರಿಗೂ ಜಾನಪದ ಪ್ರೇಮಿಗಳಿಗೂ ಹೆಚ್ಚು ಉಪಯುಕ್ತವಾಗಿದೆ. ಇಂಥ ಒಂದು ಉತ್ಕೃಷ್ಟ ಕೃತಿಯನ್ನು ಮತ್ತೆ ಪ್ರಕಟಿಸುವ ಅವಕಾಶವನ್ನು ನಮಗೆ ದೊರಕಿಸಿಕೊಟ್ಟ ಶ್ರೀ ಅರ್ಚಕ ಬಿ.ರಂಗಸ್ವಾಮಿರವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ ಎಂದಿರುವ ಶ್ರೀ ನಾಯಕರ ಜೊತೆಯಲ್ಲಿ ಕನ್ನಡ ಜಾನಪದಾಸಕ್ತರೆಲ್ಲರೂ ತಲೆಬಾಗುವುದು ಸಹಜ.

**ಜೀವನ ಸಂಗೀತ:** ಈ ವಿಶಿಷ್ಟ ಕೃತಿಯ ಸಂಪಾದಕರು ಗೆಳೆಯರ ಗುಂಪಿನ ಸದಸ್ಯರಾದ ಸಿಂಪಿ ಲಿಂಗಣ್ಣ ಮತ್ತು ಪಿ.ಧೂಲಾಸಾಹೇಬ. ಇದು ಶುದ್ಧಾಂಗ ಲಾವಣಿಗಳುಳ್ಳ ಪುಟ್ಟ ಗ್ರಂಥ. ಹನ್ನೆರಡು ದೀರ್ಘ ಲಾವಣಿಗಳ ಜೊತೆಗೆ ಶಾಸ್ತ್ರಕ್ಕೆ ಎಂಬಂತೆ ಎರಡು ಪ್ರಾರ್ಥನಾಪರ

ಮಟ್ಟ ಲಾವಣಿಗಳನ್ನು ಹೊಂದಿದೆ. ಪ್ರಕಾಶಕರು 'ಎರಡು ನುಡಿ' ಎಂಬ ಪ್ರಸ್ತಾವನೆಯಲ್ಲಿ, ಈ ಲಾವಣಿಗಳಲ್ಲಿ ಕಾಣಬಹುದಾದ ಅಶ್ಲೀಲ ನುಡಿ, ಚಿತ್ರ ಕುರಿತಂತೆ ಹೀಗೆ ಸೂಕ್ತ ಸಮಾಧಾನ ಹೇಳಿದ್ದಾರೆ: "ಸಂಸ್ಕೃತವೆನಿಸಿಕೊಳ್ಳುವ ಸಮಾಜದ ಸಾಹಿತ್ಯ ಸಂಪ್ರದಾಯಗಳನ್ನೇನೂ ಅರಿಯದೆ, ಪ್ರಕೃತಿ ಮಾತೆಯಿಂದ ನೇರವಾಗಿ ಸ್ಫೂರ್ತಿ ಪಡೆದು ಒಡನುಡಿಯುವ ಲಾವಣಿಕಾರರ ಕೆಲವೊಂದು ಕೃತಿ ಭಾಗವನ್ನು ನಮ್ಮ ದೃಷ್ಟಿಯಿಂದ ತ್ಯಾಜ್ಯವೆಂದೆನಿಸಿ ತೆಗೆದಿಡುವುದು ಸರಿಯಲ್ಲವೆಂದೆನಿಸಿತು. ಅಲ್ಲದೆ ಆಧುನಿಕರಾದ ನಾವು ಶೃಂಗಾರಿಕ ಶಬ್ದಗಳನ್ನು ಉಪಯೋಗಿಸುವುದಕ್ಕೂ ಹಳ್ಳಿಗರು ಉಪಯೋಗಿಸುವುದಕ್ಕೂ ಅರ್ಥದಲ್ಲಿ ಬಹಳ ಬಿಡುತ್ತದೆ."[4] ಎಂದು ಸಮರ್ಥಿಸಿಕೊಂಡಿದ್ದಾರೆ. ಜೊತೆಗೆ ಪ್ರಾಂತೀಯ ಪದ ಪ್ರಯೋಗದ ಅರ್ಥ ತಿಳಿಯಲು ಅನುಕೂಲವಾಗುವಂತೆ, ಗ್ರಂಥಾಂತ್ಯದಲ್ಲಿ ಅರ್ಥಕೋಶ ಕೊಟ್ಟಿರುವುದನ್ನು ಸೂಚಿಸಿದ್ದಾರೆ.

ಈ ಸಂಗ್ರಾಹಕರು 'ಪರಿಚಯ' ಎಂಬ ಭಾಗದಲ್ಲಿ ಲಾವಣಿಕಾರರಲ್ಲಿ ಪ್ರಧಾನವಾಗಿರುವ 'ಹರದೇಸಿ' ಮತ್ತು 'ನಾಗೇಸಿ' ಎಂಬೆರಡು ಪಂಥಗಳನ್ನು ಸೂಚಿಸಿ ಅವುಗಳ ಲಕ್ಷಣ, ಸ್ವರೂಪಗಳನ್ನೆಲ್ಲ ವಿವರಿಸಿದ್ದಾರೆ. ಇದೇ ಪಂಥಗಳನ್ನು ಕ್ರಮವಾಗಿ 'ತುರಾ' ಮತ್ತು 'ಕಲ್ಗಿ' ಎಂಬುದಾಗಿಯೂ ಕರೆಯುವುದಾಗಿ ತಿಳಿಸಿದ್ದಾರೆ. ಹೀಗೆ ಲಾವಣಿಕಾರರ ಹಾಗೂ ಲಾವಣಿಗಳ ಮನೋಧರ್ಮವನ್ನು ತಿಳಿಯ ಪಡಿಸಿರುವ ಸಂಪಾದಕರು ಪ್ರಾಚೀನ ಜನಪದ ಕವಿಗಳನ್ನು ಹೊಗಳಿದ್ದಾರೆ. ಆದರೆ ಈಚಿನ ಲಾವಣಿಗಳು ಸ್ವಾರಸ್ಯವಿಲ್ಲದ 'ಬರೀ ಸಂಗೀತಮಯ ಲೆಕ್ಚರ್' ಎಂದಿದ್ದಾರೆ.

**ಹಳ್ಳಿಯ ಹಾಡುಗಳು:**

ಇದರ ಸಂಗ್ರಾಹಕರು ಶ್ರೀ ವಿಠೋಬ ವೆಂಕಟನಾಯಕ ತೊರ್ಕೆರವರು. ಈ ಕೃತಿಯು ಕೇವಲ 34 ಪುಟಗಳನ್ನೊಳಗೊಂಡಿದ್ದು ಒಟ್ಟು 150 ಜನಪದ ತ್ರಿಪದಿಗಳಿವೆ. ಇದರ ಕೆಲವು ತ್ರಿಪದಿಗಳು ಕಡಲಕರೆಯ ಪ್ರಾದೇಶಿಕ ಬದುಕಿನ ಬಣ್ಣ, ಭಾಷೆಯ ಬೆಡಗನ್ನು ಮೊದಲ ಬಾರಿಗೆ ತೋರ್ಪಡಿಸಿದ್ದು, ದೊಡ್ಡ ಕಾಣಿಕೆ. ಸಂಗ್ರಾಹಕರು ಈ ಪ್ರಾಂತಗುಣವುಳ್ಳ ಗೀತೆಗಳನ್ನು 'ಎಲ್ಲರಿಗೂ ತಿಳಿಯಲಿ' ಎಂದು ಚಿಕಿತ್ಸಕ ದೃಷ್ಟಿಯಿಂದ ಅಲ್ಲಲ್ಲಿ ತಿದ್ದಿ ಸಂಸ್ಕಾರಗೊಳಿಸಿರುವುದು ಒಂದು ಕುಂದು.

ಬದನವಾಳು ಗ್ರಾಮದ ಬಿ.ಎಸ್.ರಂಗಸ್ವಾಮಿರವರು 'ಕೆಲವು ಹಳ್ಳಿಯ ಹಾಡು' ಎಂಬ ಶೀರ್ಷಿಕೆಯಲ್ಲಿ ಒಟ್ಟು 15 ಜನಪದ ತ್ರಿಪದಿಗಳನ್ನು ಮೊದಲು ಪ್ರಕಟಿಸಿದರು. ತವರು, ಸಂಗಾತಿ, ಬಸುರಿ, ಬಾಣಂತಿ, ಮಗು ಎಂಬ ಉಪಶೀರ್ಷಿಕೆಗಳನ್ನು ಕೊಟ್ಟು ಗೀತೆಗಳನ್ನು ವಿಂಗಡಿಸಿರುವುದು ಗಮನಾರ್ಹ. ಆದರೆ, ರಂಗಸ್ವಾಮಿರವರು ಜಾನಪದರ ಆಡುನುಡಿಯ ಬೆಡಗನ್ನು ಗೀತೆಯಲ್ಲಿ ಉಳಿಯಗೊಡದೆ ತಿದ್ದಿ, ನಾಗರಿಕಗೊಳಿಸಿದ್ದಾರೆ. ದಕ್ಷಿಣ ಕರ್ನಾಟಕದ ಬಯಲು ಸೀಮೆಯಲ್ಲಿ ಸಾಮಾನ್ಯವಾಗಿ ಕಾಣಸಿಗುವ ತ್ರಿಪದಿಗಳೇ ಇಲ್ಲಿನವೂ ಕೂಡ. ಶ್ರೀ.ಎಸ್.ವಿ. ರಂಗಣ್ಣನವರು ಅದೇ ವರ್ಷ 'ಹಳ್ಳಿಯ ಹಾಡುಗಳು' ಎಂಬ ಶೀರ್ಷಿಕೆಯಲ್ಲಿ ಗಣರಾಜ, ಬಂಜೆ, ಬಿಡಿನುಡಿ, ವ್ಯಾಗ್ರ ಎಂಬ ಉಪಶೀರ್ಷಿಕೆಗಳುಳ್ಳ ಹತ್ತಾರು ಜನಪದ ತ್ರಿಪದಿಗಳನ್ನು – ಕೊನೆಯದು 'ತಂದನಾನಾ' ಧಾಟಿಯ ಕಥನಗೀತೆ – ಅವುಗಳ ಮೂಲರೂಪ ಮತ್ತು ದಾಟಿಗಳನ್ನು ಕಿಂಚಿತ್ತೂ ಬದಲಿಸದೆ ಸಂಗ್ರಹಿಸಿ, ಅವುಗಳನ್ನೆಲ್ಲಾ ಯಥಾವತ್ತಾಗಿ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಿಸಿದ್ದು ನಿಜಕ್ಕೂ ಸ್ತುತ್ಯರ್ಹ ಕಾರ್ಯ, 'ಬಂಜೆ' ಎಂಬ ಶೀರ್ಷಿಕೆಯಡಿಯಲ್ಲಿರುವ ತ್ರಿಪದಿಗಳು ರಸಪೂರ್ಣವಾಗಿ, ಲಕ್ಷಣಯುಕ್ತವಾಗಿವೆ. ಉದಾ:

ಎಂಟು ವಾರನೇ ಕೊಟ್ಟು ಒಂಟೇನೆ ನಾ ತಂದೆ
ಒಂಟೆಯ ಮೇಲಾಡು ಮಗನಿಲ್ಲ । ಸೀಮೆ ಮೇಲೆ
ಬಂಜೆಯ ಗೋಳು ನಿರಿ ಗೋಳು.

**ಮಲ್ಲಿಗೆದಂಡೆ:**

ಗೆಳೆಯರ ಗುಂಪಿನ ಸದಸ್ಯರಾದ ಕಾಪಸೆ ರೇವಪ್ಪನವರು ಈ ಸಂಕಲನವನ್ನು ಪ್ರಕಟಿಸಿದ್ದಾರೆ. ಈ ಗ್ರಂಥದ ಪ್ರಕಾಶಕರಾದ ರಾಮಚಂದ್ರರಾಯರು ಬರೆದ 'ಮೊದಲಮಾತು'ಗಳಿಂದ ಗಮನಾರ್ಹವಾದ ಕೆಲವು ವಾಕ್ಯಗಳು ಇಂತಿವೆ: "ಕನ್ನಡಿಗರಿಗೆ ಜನಪದ ಸಾಹಿತ್ಯದ ರುಚಿಯನ್ನು ಹಚ್ಚಿದ ಶ್ರೇಯವು ಬಹ್ವಂಶದಿಂದ ಹಲಸಂಗಿಯ ಗೆಳೆಯರಿಗೆ ಸಲ್ಲಬೇಕು. ನಮ್ಮ ನಾಡಿಗರ ಅನುದಿನದ ಆಚಾರ ವಿಚಾರಗಳನ್ನಾಗಲಿ, ಸಂಸ್ಕೃತಿಯನ್ನಾಗಲಿ, ಸಾಂಪ್ರದಾಯಿಕ ಇತಿಹಾಸವನ್ನಾಗಲಿ, ಕಾಣಬೇಕಾದರೆ ಜನಪದ ಸಾಹಿತ್ಯಕ್ಕೆ ಮೊರೆಹೋಗಬೇಕಾಗುವುದು. ನಮ್ಮ ಜನಸಾಮಾನ್ಯರ ಭಾವನೆಯ ಉಚ್ಚತೆ, ಶೀಲದ ಸ್ವಚ್ಚತೆ, ವಿಚಾರಗಳ ವಿದಗ್ಧತೆ ಇವು ಆ ಸಾಹಿತ್ಯದಲ್ಲಿ ಓದುಗರನ್ನು ಅಚ್ಚರಿಗೊಳಿಸುವಂತೆ ಒಡಮೂಡಿಲ್ಲವೆ? ಜನಜೀವನದ ಇತಿಹಾಸ ಸಂಶೋಧಕರಿಗೆ ಶಿಲಾಲೇಖ–ತಾಮ್ರ ಪಟಗಳಿಗಿಂತಲೂ ಹೆಚ್ಚಿನ ಸಹಾಯವು ಈ ಸಾಹಿತ್ಯದಿಂದ ದೊರೆಯದಿರಲಾರದು."[5] ಮಧುರಚೆನ್ನರು ತಮ್ಮ ಮುನ್ನುಡಿಯಲ್ಲಿ 'ಮಲ್ಲಿಗೆ ದಂಡೆ'ಯ ಗೀತೆಗಳ ಭಾಷೆಯ ಬಗ್ಗೆ ಪ್ರಸ್ತಾಪಿಸಿ, ಕೆಲವು ಶುದ್ಧ ಗ್ರಾಮ್ಯರೂಪದಲ್ಲೂ ಮತ್ತೆ ಕೆಲವು ಗ್ರಾಂಥಿಕ ರೂಪದಲ್ಲೂ ಇಡಲ್ಪಟ್ಟಿವೆಯಾಗಿ, 'ಮುಂದಿನವರು ತಕ್ಕಂತೆ ಸರಿಪಡಿಸಿಕೊಳ್ಳಲಿ ಎಂದಿರುವುದು ಗಮನಾರ್ಹ ಅಂಶ. ಇಂಥ ಎಷ್ಟೋ ಇತಿಮಿತಿಗಳ ಫಲವಾಗಿ ಈ ಕೃತಿ ಗರತಿಯ ಹಾಡು ಗ್ರಂಥದ ಮಟ್ಟಕ್ಕೆ ಏರಿಲ್ಲವೆಂಬುದೂ ದಿಟ. ಆದರೂ ಅದಕ್ಕೆ ಪೂರಕವಾಗಿ, ಅನೇಕ ಹೊಸ ಗೀತೆಗಳನ್ನೊಳಗೊಂಡು ಆಕರ್ಷಕವಾಗಿದೆ.

**ಹಳ್ಳಿಯ ಬಾಳು:**

1943ರಲ್ಲಿ ಪ್ರಕಟವಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ಈ ಕೃತಿ ಗಮನಾರ್ಹವಾದುದು, ಗ್ರಂಥದ ಹೆಸರೇ ಸೂಚಿಸುವಂತೆ ಇದು ಹಳ್ಳಿಯ ಬಾಳಿನ–ಜನಪದ ಸಂಸ್ಕೃತಿಯ ಕೈಗನ್ನಡಿ. ಈ ಪ್ರಬಂಧ ಸಂಕಲನದಲ್ಲಿ ಜಾನಪದರ ಸಂಸ್ಕೃತಿಯನ್ನು ಪ್ರಸಿದ್ಧ ಜನಪದ ಗೀತೆಗಳ ಆಧಾರದಿಂದ ಜನಪದ ಕಲಾವಿದರ ಬದುಕಿನ ಹಿನ್ನೆಲೆಯಿಂದ ನಾಗರಿಕರಿಗೆ ಚೆನ್ನಾಗಿ ಪರಿಚಯಿಸಿಕೊಡುವ

ಪ್ರಯತ್ನ ಮಾಡಿ ಯಶಸ್ಸು ಗಳಿಸಿದ್ದಾರೆ. ಜಾನಪದರು ಹಾಗೂ ಜನಪದ ಸಂಸ್ಕೃತಿಗಳ ಬಗೆಗೆ ತುಂಬ ವೈಜ್ಞಾನಿಕವಾದ, ಖಚಿತವಾದ ಜ್ಞಾನ ಪಡೆದಿರುವ ಶ್ರೀಯುತರ ಕೆಲವು ಹೇಳಿಕೆಗಳು ಸರ್ವಮಾನ್ಯವಾಗಿವೆ.

ಮೊದಲ ಮಾತು, ದೇವರೊಂದಿಗೆ ಗೆಳೆತನ, ಬೆವರಿನ ಆಳು, ಲೋಕದ ಬಂಧು, ಗಂಡ–ಹೆಂಡತಿ, ಪ್ರೇಮ, ಸಂಸಾರ, ಈ ಸಾಹಿತ್ಯದ ಸೊಗಸು – ಎಂಬ ಆರು ಶೀರ್ಷಿಕೆಗಳಡಿಯಲ್ಲಿ ವ್ಯವಸ್ಥಿತವಾಗಿ ನಿರೂಪಿತವಾಗಿರುವ ಜನಪದ ಸಂಸ್ಕೃತಿ ದರ್ಶನ ಈ ಗ್ರಂಥದಿಂದ ಆಗುತ್ತದೆ. ನಾಗರಿಕತೆಗಳ ಹೋರಾಟದಲ್ಲಿ ತಲೆಯೆತ್ತಿಕೊಂಡು ನಿಂತು ನಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡಿರುವುದೇ ನಮ್ಮ ಹಳ್ಳಿಗಳ ಸಂಸ್ಕೃತಿ ಬಾಳನ್ನು ಬಾಳುವುದರಲ್ಲಿಯೂ ಕಷ್ಟಗಳಿಗೆ ಕೆಚ್ಚೆದೆಯನ್ನು ಒಡ್ಡಿ ಸಹಿಸಿ ಜಯಿಸುವುದರಲ್ಲಿಯೂ, ಪ್ರಕೃತಿ ಸೌಂದರ್ಯವನ್ನು ಸವಿಯುವುದರಲ್ಲಿಯೂ ಕಾವ್ಯವನ್ನು ಸೃಷ್ಟಿಸುವುದರಲ್ಲಿಯೂ ಅವನು ಯಾರಿಗೂ ಕಡಿಮೆ ಅಲ್ಲ. ಜನಪದ ಸಾಹಿತ್ಯದ ಸೊಗಸನ್ನು ಎತ್ತಿ ತೋರುವುದರಲ್ಲಿಯೂ ಗೊರೂರರು ಯಶಸ್ವಿಯಾಗಿದ್ದಾರೆ. ಜಾನಪದರ ಭೂಮಿಯ ಮೇಲಣ ಪ್ರೇಮ, ಅಭಿಮಾನ, ದೈವಭಕ್ತಿ, ಅಲ್ಪತೃಪ್ತಿಯ ಜೀವನ, ತ್ಯಾಗಕ್ಕೆ ಸದಾ ಸಿದ್ಧತೆ – ಇತ್ಯಾದಿ ವಿಶೇಷ ಗುಣಲಕ್ಷಣಗಳು ಜನಪದ ಗೀತ ಸಾಹಿತ್ಯದಲ್ಲಿ ಹೇಗೆ ಪಡಿಮೂಡಿವೆ ಎಂಬುದನ್ನು ನಿದರ್ಶನಗಳ ಮುಖಾಂತರ ತೋರಿದ್ದಾರೆ. ಆಗ ಪ್ರಚಲಿತವಿದ್ದ ಎಲ್ಲ ಮೂಲಗಳಿಂದಲೂ ಜನಪದ ತ್ರಿಪದಿ, ಲಾವಣಿಗಳನ್ನು ಬಳಸಿಕೊಂಡಿದ್ದಾರೆ.

ಎಚ್.ಎಸ್. ಅಚ್ಚಪ್ಪನವರ **'ಕನ್ನಡ ಗಾದೆಗಳು'** ಎಂಬ ಗಾದೆಗಳ ಸಂಗ್ರಹ 1944ರಲ್ಲಿ ಪ್ರಕಟವಾಯಿತು. ಇದು ಶುದ್ಧಾಂಗವಾಗಿ ಜನಪದ ಗಾದೆಗಳನ್ನೇ ಒಳಗೊಂಡ ಸಂಗ್ರಹವಲ್ಲ. ಆದರೆ ನೂರಾರು ಜನಪದ ಗಾದೆಗಳು ಇದರಲ್ಲಿವೆಯಾಗಿ ಗಮನಾರ್ಹ. ಅಚ್ಚಪ್ಪನವರು ಮಾಸ್ತಿಯವರ ಪ್ರೋತ್ಸಾಹದಿಂದ ಈ ಕಾರ್ಯಕ್ಕಿಳಿದುದಾಗಿ ತಿಳಿಸಿದ್ದಾರೆ. ಈ ಗ್ರಂಥಕ್ಕೆ ಮುನ್ನುಡಿ ಬರೆದು ಹರಸಿರುವ ನಾ.ಕಸ್ತೂರಿಯವರು ಗಾದೆಗಳು ಜನಸಾಮಾನ್ಯರ ಅನುಭವಾಮೃತವಾಕ್ಕುಗಳೆಂದು ಹೊಗಳಿದ್ದಾರೆ.

**ನಾಡಪದಗಳು:**

ಈ ಕೃತಿ 1947ರಲ್ಲಿ ಹೊರ ಬಂದಿತು. ಇದರ ಸಂಪಾದಕರು ಎಲ್.ಗುಂಡಪ್ಪನವರು. ಬಿ.ಎಂ.ಶ್ರೀ ಅವರ ಮುನ್ನುಡಿಯ ಕೆಲವು ಮಾತುಗಳು ಇಲ್ಲಿ ಸ್ಮರಣಾರ್ಹವಾಗಿವೆ. ಶ್ರೀಯುತರು ತಮ್ಮ ಶಿಷ್ಯರಲ್ಲಿ ಸ್ನೇಹಿತರನ್ನು ಜನಪದ ಸಾಹಿತ್ಯ ಸಂಗ್ರಹಣೆ, ಪ್ರಕಟಣೆಗಾಗಿ ಹುರಿದುಂಬಿಸುತ್ತಿದ್ದು, ಒಳ್ಳೆಯ ಕೆಲಸ ಮಾಡಿದವರನ್ನು ಹೃತ್ಪೂರ್ವಕವಾಗಿ ಮೆಚ್ಚಿ, ಬೆನ್ನುತಟ್ಟಿ, ತಮಗೆ ಗುರುಕಾಣಿಕೆ ಸಂದಾಯಿತೆಂದು ಮುದಗೊಳ್ಳುತ್ತಿದ್ದ ಕಾಲ ಅದು. 'ಭಿನ್ನಹ' ಎಂಬ ಭಾಗದಲ್ಲಿ ಎಲ್.ಗುಂಡಪ್ಪ ಅವರು ತಮ್ಮ ಊರಿನಲ್ಲಿ ಚಿಕ್ಕಂದಿನಿಂದಲೂ ತಾವೂ ಕೇಳುತ್ತಿದ್ದ, ಜನಪದ ಗೀತೆಗಳ ಪ್ರಸ್ತಾಪ ಮಾಡಿ, ತಮ್ಮ ಸೋದರರು ಈ ಗೀತ ಸಂಗ್ರಹಕ್ಕೆ ಹೇಗೆ ತೊಡಗಿದರೆಂಬುದನ್ನು ವಿವರಿಸಿದ್ದಾರೆ. ಹಳೆಯಬೀಡಿನ ಹತ್ತಿರದ ಒಂದೂರಾದ ಮತಿಘಟ್ಟದಲ್ಲಿ ದೊರೆತ ಕೋಲಾಟದ ಪದ, ತಿಂಗಳ ಮಾವನ, ಮದುವೆಯ ಹಾಗೂ ಇತರೆ ಸಂದರ್ಭಗಳ ಪದಗಳನ್ನು ಸಂಗ್ರಹಿಸಿ ಪ್ರಕಟಿಸಿರುವುದಾಗಿ ಭಿನ್ನವಿಸಿಕೊಂಡಿದ್ದಾರೆ. ಮಾಸ್ತಿಯವರ ಪ್ರೋತ್ಸಾಹವನ್ನು ಹೆಮ್ಮೆಯಿಂದ ಸ್ಮರಿಸಿದ್ದಾರೆ. ವಿಶೇಷವಾಗಿ ತಮ್ಮ ಪಾಠ ಪ್ರವಚನಗಳ ಮುಖಾಂತರ ಬಿ.ಎಂ.ಶ್ರೀರವರು ಶಿಷ್ಯರನ್ನು ಹುರಿದುಂಬಿಸಿ, ತಮ್ಮಿಂದ ಇಂಥ ಕೆಲಸ ಸಾಧ್ಯವಾಗುವಂತೆ ಮಾಡಿದ್ದಲ್ಲದೆ, ಅಚ್ಚಿಗೆ ಸಿದ್ಧವಾದ ಈ ನಾಡಪದಗಳಲ್ಲಿ ಪರಿಚಯಪೂರ್ಣ ಟಿಪ್ಪಣಿ ಭಾಗಗಳನ್ನು ಅಮೂಲಾಗ್ರವಾಗಿ ಓದಿ ಪರಿಷ್ಕರಿಸಿ, ಹೆಮ್ಮೆಯಿಂದ ಮುನ್ನುಡಿ ಬರೆದು ಹರಸಿದ ಶ್ರೀ ಅವರನ್ನು ತುಂಬು ಗೌರವದಿಂದ ನೆನೆದಿದ್ದಾರೆ.

ಈ ಗೀತ ಸಂಗ್ರಾಹಕರಿಗಿರುವಂತೆಯೇ ಸಂಪಾದಕರಿಗೂ ಕನ್ನಡ ಜನಪದ ಸಂಸ್ಕೃತಿಯ ನೇರ ಪರಿಚಯ, ಕಳಕಳಿ ಅರಿವು ದಟ್ಟವಾಗಿದೆ. ಎಂತಲೇ ಕೋಲಾಟದ ರೀತಿನೀತಿ ಕೋಲುಗಳ ಪ್ರಮಾಣ ಮುಂತಾದ ಅನೇಕ ಅಂಶಗಳನ್ನು ವಿವರಿಸಿದ್ದಾರೆ. ವಾಸ್ತವವಾಗಿ ಕನ್ನಡ ಜನಪದ ಗೀತೆಗಳಲ್ಲಿ ಉತ್ತಮ ಕೋಲಾಟದ ವಿವಿಧ ಧಾಟಿಗಳನ್ನು ವೈವಿಧ್ಯ ಪೂರ್ಣತೆಗಳನ್ನೂ ಮೊದಲು ಕಾಣುವುದು. 'ನಾಡಪದಗಳು' ಕೃತಿಯೊಂದರಲ್ಲಿಯೇ. ಒಟ್ಟಿನಲ್ಲಿ ತುಂಬಾ ಸೊಗಸಾದ, ರಸವತ್ತಾದ ಸಾವಿರಾರು ಜನಪದ ತ್ರಿಪದಿಗಳನ್ನು ಅವುಗಳ ಮೂಲಧಾಟಿಯಲ್ಲಿ ಕಾಣಬೇಕು, ಹಾಡಬೇಕು ಎಂಬುವರು ನಾಡಪದಗಳನ್ನು ಸಂತೋಷವಾಗಿ ಹಾಡಿ ತಣಿಯಬಹುದು. ಇದು ಉತ್ಕೃಷ್ಟ ಸಂಗ್ರಹ, ಈ ಗ್ರಂಥದ ಕೊನೆಗಿರುವ ತುಂಬ ವಿಸ್ತಾರವಾದ, ದಿಟಕ್ಕೂ ಪ್ರಯೋಜನಕಾರಿಯಾದ ಟಿಪ್ಪಣಿ ಭಾಗವು ಅಭ್ಯಾಸ ಯೋಗ್ಯವಾಗಿದೆ. ಈ ಗ್ರಂಥದ ಪುಟಪುಟದಲ್ಲಿಯೂ ಸಂಪಾದಕರ ದಕ್ಷತೆ, ಸಂಗ್ರಾಹಕರ ಪ್ರಾಮಾಣಿಕತೆ ಎದ್ದು ಕಾಣುತ್ತದೆ. ಇಂಥ ಸಮರ್ಥ ಸಂಗ್ರಹಗಳು ಕನ್ನಡದಲ್ಲಿ ವಿರಳ.

ಸ್ವಾತಂತ್ರ್ಯೋತ್ತರ ಆರಂಭಕಾಲದಲ್ಲಿ ಜನಪದಗೀತೆಗಳ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಇಬ್ಬರು ಮಹನೀಯರೆಂದರೆ ಉತ್ತರ ಕರ್ನಾಟಕದಲ್ಲಿ ಡಾ.ಬಿ.ಎಸ್.ಗದ್ದಗೀಮಠ, ದಕ್ಷಿಣ ಕರ್ನಾಟಕದಲ್ಲಿ ಕರಾಕೃ. ಬಯಲು ಸೀಮೆಯ ಜಾನಪದದ ಸಂಗ್ರಹಣೆ ಮತ್ತು ವಿಶ್ಲೇಷಣೆಗೆ ಸಂಬಂಧಿಸಿದಂತೆ ಜೀ.ಶಂ.ಪ ಅವರದು ಬಹುದೊಡ್ಡ ಸಾಧನೆ. ದಕ್ಷಿಣ ಕರ್ನಾಟಕದ ವೃತ್ತಿಗಾಯಕರ ಕಾವ್ಯ ಸಂಪ್ರದಾಯಗಳನ್ನು ಗುರುತಿಸಿ ವ್ಯವಸ್ಥಿತವಾಗಿ ಅಧ್ಯಯನಿಸಿದ್ದು, ಅವರ ಬಹು ಮಹತ್ವದ ಕೊಡುಗೆ. ಹಾಗೆಯೇ ಪ್ರೊ.ಡಿ.ಲಿಂಗಯ್ಯ, ಡಾ.ರಾಗೌ.ಎಚ್.ಎಲ್.ನಾಗೇಗೌಡ, ಪ್ರೊ.ಸುಧಾಕರ, ಡಾ.ಚಂದ್ರಶೇಖರ ಕಂಬಾರ, ಡಾ.ಕೃಷ್ಣಮೂರ್ತಿ ಹನೂರು, ಡಾ.ಕಾಳೇಗೌಡ ನಾಗವಾರ, ಕ್ಯಾತನಹಳ್ಳಿ ರಾಮಣ್ಣ ಮೊದಲಾದವರು ಜಾನಪದ ಸಾಹಿತ್ಯದ ಸಂಗ್ರಹಣೆ ಮಾಡಿದ್ದಾರೆ.

ಡಾ.ದೇಜಗೌ, ಡಾ.ಎಂ.ಚಿದಾನಂದಮೂರ್ತಿ, ಸಿ.ಪಿ.ಕೆ. ಹಂಪನಾ ಮೊದಲಾದ ವಿದ್ವಾಂಸರು ಜಾನಪದ ಅಧ್ಯಯನಕ್ಕೆ ಸೂಕ್ತ ಸಮರ್ಥನೆ ಒದಗಿಸುವಂತಹ ಮಹತ್ವದ ಕೆಲಸವನ್ನು ತಮ್ಮ ಉಪನ್ಯಾಸ ಹಾಗೂ ಬರಹಗಳ ಮೂಲಕ ಮಾಡಿದರು. ಜಾನಪದದ ಯಾವುದಾದರೊಂದು ವಿಷಯವನ್ನು ಅಂತರ್ ಶಾಸ್ತ್ರೀಯ ದೃಷ್ಟಿಯಿಂದ ಅಧ್ಯಯನ ಮಾಡುವುದಕ್ಕೆ ಡಾ.ಎಂ.ಚಿದಾನಂದ ಮೂರ್ತಿಯವರ ಬರಹಗಳು ಮಾದರಿಯಾದವು.

1980ರ ಬಳಿಕ ಆಧುನಿಕ ಸಾಧನಗಳ ಮೂಲಕ ಸಂಗ್ರಹದ ಜೊತೆಗೆ ಅಂತರ್ ಶಾಸ್ತ್ರೀಯ ನೆಲೆಯಲ್ಲಿ ಜಾನಪದವನ್ನು ವಿಶ್ಲೇಷಣೆಯ ಮೂಲಕ ನಿರ್ವಹಿಸುವ, ಆ ಮೂಲಕ ಸಾಂಪ್ರದಾಯಿಕ ಆಲೋಚನೆಗಳಿಗೆ ಪರ್ಯಾಯಗಳನ್ನು

ಕಂಡುಕೊಳ್ಳುತ್ತಿರುವವರನ್ನು ಮೂರನೆಯ ತಲೆಮಾರು ಎನ್ನಬಹುದು. ಜಾನಪದವನ್ನು ಕೇವಲ ಸಂಗ್ರಹಣೆಯ ಮೂಲಕ ಉಳಿಸಿಕೊಳ್ಳಬೇಕೆನ್ನುವ ವೈಚಾರಿಕತೆ ಈ ತಲೆಮಾರಿನಲ್ಲಿ ಪ್ರಧಾನವಾಗಿದೆ. ಕರ್ನಾಟಕದ ಜಾನಪದ ಅಧ್ಯಯನದಲ್ಲಿ 1990ರ ದಶಕವನ್ನು ಆವಿಷ್ಕಾರದ ಕಾಲವೆನ್ನಬಹುದು. 'ಜಾನಪದ ಅಧ್ಯಯನವೆಂದರೆ ಅದೊಂದು ವಸ್ತುಗಳ ಸಂಗ್ರಹಣೆಯ, ಆಕರ ಸಾಮಾಗ್ರಿಗಳ ದಾಸ್ತಾನು ಕೊಠಡಿ' ಎನ್ನುವ ಅಭಿಪ್ರಾಯವನ್ನು ಬದಲಿಸಿ, ಅದು ಬದುಕುವ ಹಾಗೂ ಪರಂಪರೆಯ ರೂಪದಲ್ಲಿ ಸಂರಕ್ಷಿಸಿಕೊಂಡು ಬರುತ್ತಿರುವುದರ ಸಂಕೇತ ಎನ್ನುವಂತಾಯಿತು. ಮೌಖಿಕ ಪರಂಪರೆಯಲ್ಲಿದ್ದ ಮಹಾಕಾವ್ಯಗಳು ಮತ್ತು ಆ ಕುರಿತಾದ ಚರ್ಚೆಗಳು ಪ್ರಾಮುಖ್ಯತೆ ಪಡೆದವು. 'ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು' ಅಧ್ಯಯನಕ್ಕೆ ಪ್ರಸಿದ್ಧರಾದ ತೀ.ನಂ.ಶಂಕರನಾರಾಯಣ ಅವರ 'ಜನಪದ ಮಹಾಕಾವ್ಯ' ವಿಶ್ಲೇಷಣಾ ಕೃತಿ. ಪಿ.ಕೆ.ರಾಜಶೇಖರರು ಸಂಗ್ರಹಿಸಿ ಪ್ರಕಟಿಸಿದ ಜನಪದ ರಾಮಾಯಣ ಮತ್ತು ಮಹಾಭಾರತಗಳು ಹಾಗೂ ಬಸವಪುರಾಣ, ಪರ್ಯಾಯ ಇರುವುದೊಂದನ್ನು ಪರಿಚಯಿಸಿದವು. ಈ ದಶಕದಲ್ಲಿ ಹಿಂದೆ ಸಂಪಾದಿಸಿದ್ದ ಅನೇಕ ಜನಪದ ಪಠ್ಯಗಳು ಮರು ಓದು ವಿಮರ್ಶೆಗಳಿಗೆ ತೆರೆದುಕೊಂಡು ಮರುಮುದ್ರಣಗಳಿಗೂ ಕಾರಣವಾಯಿತು.

ತೊಂಬತ್ತರ ದಶಕದಲ್ಲಿ ಬಂದ ಕೃತಿ ಶೀರ್ಷಿಕೆಗಳನ್ನು ಗಮನಿಸುವುದಾದರೆ ಅವು 'ಬಂಡಾಯ ಜಾನಪದ', 'ದಲಿತ ಜಾನಪದ' (ರಂಗಾರೆಡ್ಡಿ) ಪ್ರಣೀತ (ಜಿ.ಆರ್.ತಿಪ್ಪೇಸ್ವಾಮಿ) ಜನಪದ ಗೀತೆಗಳಲ್ಲಿ ವರ್ಣ ಹಾಗೂ ವರ್ಗ ಪ್ರಜ್ಞೆ, (ನಿಂಗಣ್ಣಸಣ್ಣಕ್ಕಿ) ಕರಾವಳಿ ಜನಪದ ಸಾಹಿತ್ಯದ ಸ್ತ್ರೀವಾದಿ ನೆಲೆಗಳು (ಗಾಯತ್ರಿನಾವಡ) ಇತ್ಯಾದಿ ಕೃತಿಗಳು ಬಂಡಾಯ ಪ್ರಜ್ಞೆ ಮತ್ತು ಸ್ತ್ರೀವಾದಿ ನೆಲೆಯವುಗಳಾಗಿ ಕಂಡುಬರುತ್ತವೆ. ಇದೇ ಸಂದರ್ಭದಲ್ಲಿ 'ಆಕಾಶ ಜಾನಪದ', 'ಸಸ್ಯ ಜಾನಪದ', 'ಪ್ರಾಣಿ ಜಾನಪದ', 'ಜಾತ್ರೆಗಳು' 'ಗ್ರಾಮದೇವತೆಗಳು' ಹಾಗೂ ಹಳ್ಳಿಯ ಕುರಿತಾದ ಜಾನಪದೀಯ ಅಧ್ಯಯನಗಳು ನಡೆದು ವಸ್ತು ವೈವಿಧ್ಯಗಳ ನೆಲೆಗಳಲ್ಲಿ ಪರ್ಯಾಯ ಸಂಸ್ಕೃತಿಗಳ ಶೋಧನೆಯನ್ನು ಕಟ್ಟಿಕೊಟ್ಟವು.

ಭಾರತದ ಒಟ್ಟು ಸಂದರ್ಭದ ಜಾನಪದ ಅಧ್ಯಯನದಲ್ಲಿ ಕರ್ನಾಟಕ ಮುಂದಿದೆ. ಇದು ಉತ್ಪ್ರೇಕ್ಷೆಯಲ್ಲ. ಅದರಲ್ಲೂ ಲೋರಿ ಹಾಂಕೊ ಗುರುತಿಸಿದಂತೆ – 'ಭಾರತದ ಕ್ಯಾಲಿಪೋರ್ನಿಯಾ' ಎಂದು ಕರೆಸಿಕೊಳ್ಳುವ ಕರಾವಳಿ ವಲಯ ಅಧ್ಯಯನದಲ್ಲಿನ ಪ್ರಾಮಾಣಿಕ ಮತ್ತು ವಸ್ತುನಿಷ್ಠ ಧೋರಣೆಗಳಿಗಾಗಿ ಇನ್ನೂ ಮುಂದಿದೆ. ಇಲ್ಲಿ ವೈಜ್ಞಾನಿಕ ಕ್ಷೇತ್ರಕಾರ್ಯ, ಆಕರಗಳ ಸಂಗ್ರಹ, ವಿವರಣೆ, ಸೈದ್ಧಾಂತಿಕ ವಿಶ್ಲೇಷಣೆ ಒಟ್ಟಾಗಿಯೇ ನಡೆದುದರ ಕುರಿತಾದ ಖಚಿತ ದಾಖಲೆಗಳು ಸಿಗುತ್ತವೆ. ಕರ್ನಾಟಕದ ಜಾನಪದ ಅಧ್ಯಯನ ಮೂಲಗಳಲ್ಲಾದ ಜ್ಞಾನಶೋಧನೆ ಮೌಲಿಕವಾದುದೆನ್ನುವುದರಲ್ಲಿ ಎರಡು ಮಾತಿಲ್ಲ. ಈ ಮೌಲಿಕ ಮತ್ತು ವೈಶಿಷ್ಟ್ಯ ಪೂರ್ಣ ದೇಸಿ ಚಿಂತನೆಗಳನ್ನು ಜಗತ್ತಿಗೆ ತಿಳಿಯಪಡಿಸಬೇಕಾದರೆ ಅದನ್ನು ಅಂತರರಾಷ್ಟ್ರೀಯ ಭಾಷೆಯಲ್ಲಿ ಆಧುನಿಕ ಮಾಧ್ಯಮ ಜಾಲಗಳಲ್ಲಿ ಹರಿಯಬಿಡಬೇಕಾಗುತ್ತದೆ. ಆಗ ನಮ್ಮ ಜಾನಪದದಲ್ಲಿನ ಜ್ಞಾನ ಮೂಲಕ್ಕಿರುವ 'ಉತ್ಪನ್ನಾತ್ಮಕ' ಗುಣಗಳನ್ನು ಬಳಕೆಯ ಸಾಧನವಾಗಿಸಲು ಸಾಧ್ಯವಾಗುತ್ತದೆ.

ಹೀಗೆ ಕರ್ನಾಟಕ ಜಾನಪದ ಅಧ್ಯಯನದ ಇತಿಹಾಸವನ್ನು ಅವಲೋಕನ ಮಾಡಿದರೆ ವೈವಿಧ್ಯಮಯ ಸಂಸ್ಕೃತಿ, ಕಲೆ, ಆಚಾರ–ವಿಚಾರ, ಜೀವನ ದರ್ಶನ, ಬದುಕಿನ ರೀತಿ–ನೀತಿ, ತತ್ವಾದರ್ಶಗಳು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಜನಪದ ಗೀತ ಸಾಹಿತ್ಯದ ಆರಂಭದ ಕೆಲವೊಂದು ಪ್ರಮುಖ ಪ್ರಾತಿನಿಧಿಕ ಕೃತಿಗಳನ್ನು ವಿಶ್ಲೇಷಿಸಿ ಜಾನಪದ ನಡೆದು ಬಂದ ದಾರಿಯ ಬಗೆಗೆ ಒಂದು ಪಕ್ಷಿನೋಟವನ್ನಷ್ಟೇ ಇಲ್ಲಿ ಮಾಡಲಾಗಿದೆ.

**ಅಡಿ ಟಿಪ್ಪಣಿಗಳು**

1. ಗರತಿಯ ಹಾಡು, ಸಂ: ಸಿಂಪಿಲಿಂಗಣ್ಣ, ಪುಟ – 22
2. ಹುಟ್ಟಿದ ಹಳ್ಳಿ, ಗ್ರಂಥದ ಅರಿಕೆ, ಸಂ: ಅರ್ಚಕ ಬಿ ರಂಗಸ್ವಾಮಿ, ಪುಟ IV.
3. ಅದೇ ಮುನ್ನುಡಿ ಭಾಗ, ಪುಟ VIII.
4. ಜೀವನ ಸಂಗೀತ, ಸಂ: ಪಿ.ಧೂಲಸಾಹೇಬ, ಸಿಂಪಿಲಿಂಗಣ್ಣ, ಪುಟ III.
5. ಮಲ್ಲಿಗೆ ದಂಡೆ, ಸಂ: ಕಾಪಸೆ ರೇವಪ್ಪ, ಪುಟ VIII.

**ಪರಾಮರ್ಶನ ಗ್ರಂಥಗಳು**

1. ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ – ಡಾ.ನಂ.ತಪಸ್ವೀಕುಮಾರ್
2. ಕರ್ನಾಟಕ ಸಂಶೋಧನಾ ಜಾನಪದ – ಸಂ.ಪ್ರೊ.ಅಂಬಳಿಕೆ ಹಿರಿಯಣ್ಣ
3. ದಕ್ಷಿಣ ಕರ್ನಾಟಕದ ಜಾನಪದ ಕಾವ್ಯ ಪ್ರಕಾರಗಳು – ಡಾ.ಜೀ.ಶಂ.ಪರಮಶಿವಯ್ಯ
4. ಜಾನಪದ ಅಧ್ಯಯನ – ಡಾ.ದೇ.ಜ.ಗೌ
5. ಹೊನ್ನ ಬಿತ್ತೇವು ಹೊಲಕ್ಕೆಲ್ಲ – ಕರ್ನಾಟಕ ಜಾನಪದ ಅಕಾಡೆಮಿ (ಸ್ಮರಣ ಸಂಚಿಕೆ)